<u>ಸಾಕ್ಷಿಗೆ ದಿನಾಂಕಃ **12.01.2026** ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ</u>

<u>ಮುಂದುವರಿದ ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀಮತಿ.ಇ.ಕೆ.ಎಸ್. ರವರಿಂದಃ</u>

1) ಅನುಮತಿ ಪತ್ರವನ್ನು **ನಿ.ಪಿ.16** ಎಂದು ಗುರುತಿಸಿದೆ.

2) **Rajarajeshwari Medical college** ಮತ್ತು ಆಸ್ಪತ್ರೆಯಲ್ಲಿ ಇಟ್ಟಿರುವಂತಹ **Medico Legal Case Register** ರ ಮೂಲ ದಾಖಲೆಯನ್ನು ಮತ್ತು ಇದೇ ದಾಖಲೆಯ ನಕಲನ್ನು ಅಂದರೆ ದಿಃ**13.08.2023** ರ ಹಾಳೆಯ ನಕಲನ್ನು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಯನ್ನು ಮತ್ತು ಫೋಟೋ ಪ್ರತಿಯನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಯನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಯನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಯನ್ನು ನಿ.ಪಿ.**17** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಯನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

<u>ಪಾಟೀ ಸವಾಲು: **2** ನೇ ಎದುರುದಾರರ ಪರ **Smt.PSU** ವಕೀಲರಿಂದಃ</u>

1) ಕಳೆದ **22** ವರ್ಷಗಳಿಂದ ನಾನು ರಾಜರಾಜೇಶ್ವರಿ ಆಸ್ಪತ್ರೆಯಲ್ಲಿ ಕರ್ತವ್ಯ ಮಾಡುತ್ತಿದ್ದೇನೆ. ನಿ.ಪಿ.**17** ದಾಖಲೆಯಲ್ಲಿ ಇರುವ ವಿವರಗಳನ್ನು ಆ ದಿನ

ಇದ್ದಂತಹ ಡಾಕ್ಟರ್ ರವರು ಬರೆದಿದ್ದಾರೆ.

2) ರೋಗಿ ಅಥವಾ ರೋಗಿಯ ಜೊತೆ ಬಂದಂತಹ ವ್ಯಕ್ತಿಗಳ ಮಾತಿನ ಆಧಾರದ ಮೇರೆಗೆ ನಮ್ಮ ಆಸ್ಪತ್ರೆಯ ಅಧಿಕಾರಿಗಳು ಎಂ.ಎಲ್.ಸಿ ರಿಜಿಸ್ಟರ್ ನಲ್ಲಿ ವಿವರಗಳನ್ನು ನಮೂದು ಮಾಡುತ್ತಾರೆ.

3) ರೋಗಿಯ ಜೊತೆ ಓರ್ವ ಮಧುಶ್ರೀ ರವರು ಬಂದಿದ್ದರು ಮತ್ತು ಆ ಮಧುಶ್ರೀ ರವರು ನೀಡಿದ ಮಾಹಿತಿಯ ಆಧಾರದ ಮೇರೆಗೆ ನಿ.ಪಿ.**17** ರಲ್ಲಿ ವಿವರಗಳನ್ನು ನಮೂದು ಮಾಡಲಾಗಿದೆ ಎಂದು ಕಂಡು ಬರುತ್ತದೆ ಎಂದರೆ ಸರಿ.

**ಪಾಟೀ ಸವಾಲು: 1 ನೇ ಎದುರುದಾರರ ಪರ ವಕೀಲರಿಂದಃ**

ಸದರಿ ಎದುರುದಾರರು ಮತ್ತು ಅವರ ಪರ ವಕೀಲರು ಹಾಜರಿಲ್ಲ. ಆದ ಕಾರಣದಿಂದ ಯಾವುದೇ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.